ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ. ತಾವು ಮನಸ್ಸನ್ನು ಬದಲಾವಣೆ ಮಾಡಿಕೊಳ್ಳಬೇಕು. ತಾವು ಮನಸ್ಸನ್ನು ಬದಲಾವಣೆ ಮಾಡಿಕೊಂಡು ಇವತ್ತಿನ ಈ ಗಂಭೀರವಾದ ಪರಿಸ್ಥಿತಿಯನ್ನು ಎದುರಿಸಲಿಕ್ಕೆ ರೈತರ ನೆರವಿಗೆ ಬರಬೇಕು. ನಾವು ಕೇಂದ್ರ ಸರ್ಕಾರದಿಂದ ಸಹಾಯ ಪಡೆಯಲಿಕ್ಕೆ ಏನೆಲ್ಲಾ ಕ್ರಮಗಳನ್ನು ಮಾಡಬೇಕೋ ಅದನ್ನು ಮಾಡೋಣ. ತಾವು ಮನಸ್ಸು ಮಾಡಬೇಕೆಂದು ನಾನು ಮತ್ತೊಮ್ಮೆ ಮನವಿ ಮಾಡುತ್ತಿದ್ದೇನೆ. ಈ ಸರ್ಕಾರ ತನ್ನ ಮನಸ್ಸು ಪರಿವರ್ತನೆ ಮಾಡಿಕೊಳ್ಳುತ್ತಿಲ್ಲ. ನಾವೂ ಕೂಡ ಸರ್ಕಾರವನ್ನು ನಡೆಸಿದ್ದೇವೆ. ನಮಗೆ ಅದರ ಏಳುಬೀಳುಗಳು ಗೊತ್ತಿದೆ. ಹಿಂದೆ ನಾವು ನಬಾರ್ಡ್‌ಗೆ ನಮ್ಮ ಸರ್ಕಾರದ ಅವಧಿಯಲ್ಲಿ ಮತ್ತೊಮ್ಮೆ ಸಾಲದ ಬಡ್ಡಿಯನ್ನು ಮನ್ನಾ ಮಾಡುವುದಿಲ್ಲ ಎಂದು ಹೇಳಿದ್ದೇವೆಯೇ ಹೊರತು ಶಾಶ್ವತವಾಗಿ ಬಡ್ಡಿ ಮನ್ನಾ ಮಾಡುವುದೇ ಇಲ್ಲವೆಂದು ನಾವು ಬರೆದು ಕೊಟ್ಟಿಲ್ಲ. 1983, 1985 ಮತ್ತು 1995ರಲ್ಲಿ ಮೂರೂ ಸಂದರ್ಭಗಳಲ್ಲೂ ನಾವು ಅದೇ ರೀತಿ ಹೇಳಿದ್ದೇವೆ. ಅದರ ನೆಪ ಮಾಡಿಕೊಂಡು ಇವತ್ತು ಈ ರೀತಿ ಮಾತನಾಡುವುದು ಸರಿಯಿಲ್ಲ. ಈ ಒಂದು ಧೋರಣೆಯನ್ನು ಸರ್ಕಾರ ಬದಲಾವಣೆ ಮಾಡಿಕೊಳ್ಳಬೇಕು ಎಂದು ಒತ್ತಾಯಿಸಿ ನಾವು ಧರಣಿ ಮಾಡುತ್ತಿದ್ದೇವೆ.

ಶ್ರೀ ಸಿ.ಬೈರೇಗೌಡ: ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಯಾವ್ಯಾವ ಜಿಲ್ಲೆಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಏಪ್ರಿಲ್ ತಿಂಗಳಿನಿಂದ ಇಲ್ಲಿಯವರೆಗೆ ಬಿಡುಗಡೆ ಮಾಡಿರತಕ್ಕ ಹಣ ಏವರ ನೀಡಿದ್ದಾರೆ. ಈಗಾಗಲೇ ಈ ಬಾಬಿನಲ್ಲಿ ಹಣ ಖರ್ಚಾಗಿದೆ. ಇವತ್ತಿನ ತುರ್ತು ಅವಶ್ಯಕತೆಗಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ಎಂಬ ಬಗ್ಗೆ ಸರ್ಕಾರ ಲೆಕ್ಕ ಕೊಟ್ಟಿಲ್ಲ. ತಪ್ಪು ಅಭಿಪ್ರಾಯಕ್ಕೆ ಬರತಕ್ಕಂಥ ಹೇಳಿಕೆಯನ್ನು ಮಾನ್ಯ ಸಚಿವರು ಇಲ್ಲಿ ಕೊಟ್ಟಿದ್ದಾರೆ.

(ಈ ಹಂತದಲ್ಲಿ ಮಾನ್ಯ ಪಿ.ಜಿ.ಆರ್.ಸಿಂಧ್ಯಾರವರ ನೇತೃತ್ವದಲ್ಲಿ ಜನತಾದಳ (ಯು) ಪಕ್ಷದ ಮಾನ್ಯ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ನಿರತರಾದರು)

(ಗೊಂದಲ)

ಅಧ್ಯಕ್ಷರು: ಉತ್ತರ ನೀಡಿದ್ದು ಮುಗಿಯಿತು. ಮುಂದಿನ ಕಾರ್ಯಕ್ರಮ ಏತ್ತೀಯ ಕಾರ್ಯಕಲಾಪಗಳನ್ನು ಈಗ ಕೈಗತ್ತಿಕೊಳ್ಳುತ್ತಿದ್ದೇನೆ. 2001-2002ನೇ ಸಾಲಿನ ಬೇಡಿಕೆಗಳನ್ನು ಮಾನ್ಯ ಸಚಿವರು ಸದನದ ಮುಂದೆ ಮಂಡಿಸಬೇಕೆಂದು ಕೋರುತ್ತೇನೆ.

(ಗೊಂದಲ)

ಶ್ರೀ ಜಗದೀಶ್‌ಶೆಟ್ಟರ್: ಮಾನ್ಯ ಅಧ್ಯಕ್ಷರೇ, ಮುಂದಿನ ಬಿಸಿನೆಸ್ ಅನ್ನು